ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 412

ಸದಸ್ಯರ ಹೆಸರು : ಶ್ರೀ ಎಸ್. ರವಿ
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ : 22-12-2022

ಉತ್ತರಿಸುವವರು : ಸನ್ಮಾನ್ಯ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳಲ್ಲಿ ಚಿರತೆಗಳ ಹಾವಳಿ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕಳೆದ 3 ವರ್ಷಗಳಲ್ಲಿ ಎಷ್ಟು ಪ್ರಕರಣಗಳು ಬೆಳಕಿಗೆ ಬಂದಿವೆ; ಈ ಪ್ರಕರಣಗಳಲ್ಲಿ ಜೀವಹಾನಿ ಹೊಂದಿರುವವರಿಗೆ ಸಹಾಯಧನ ಒದಗಿಸಲು ಕ್ರಮ ಕೈಗೊಳ್ಳಲಾಗಿದೆಯೇ;<br>(ಕೈಗೊಂಡಿದ್ದಲ್ಲಿ, ಪ್ರಕರಣವಾರು ಸಂಪೂರ್ಣ ವಿವರ ನೀಡುವುದು) | ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳಲ್ಲಿ ಕಳೆದ 3 ವರ್ಷಗಳಲ್ಲಿ ಚಿರತೆ ದಾಳಿಯಿಂದ ಉಂಟಾದ ಮಾನವ ಪ್ರಾಣ ಹಾನಿ ಪ್ರಕರಣಗಳ ವಿವರ ಈ ಕೆಳಗಿನಂತಿದೆ.<br><br>ಸರ್ಕಾರಿ ಆದೇಶ ಸಂಖ್ಯೆ:<br>1) ಅಪಜೀ 143 ಎಫ್.ಡಬ್ಲ್ಯೂ.ಎಲ್ 2010, ದಿನಾಂಕ: 03.08.2011 ರ ಪ್ರಕಾರ ರೂ.5.00 ಲಕ್ಷಗಳ ಪರಿಹಾರ ಧನವನ್ನುಪಾವತಿಸಲಾಗಿದೆ.<br>2) ಅಪಜೀ 66.ಎಫ್‌ಡಬ್ಲ್ಯೂಎಲ್ 2019, ದಿನಾಂಕ : 07.01.2020 ರ ಪ್ರಕಾರ ರೂ.7.50 ಲಕ್ಷಗಳ ಪರಿಹಾರ ಧನವನ್ನು ಪಾವತಿಸಲಾಗಿದೆ<br><br>(ರೂ. ಲಕ್ಷಗಳಲ್ಲಿ) |

| ಕ್ರ. ಸಂ | ಜಿಲ್ಲೆ | ದಿನಾಂಕ | ಮೃತಪಟ್ಟವರ ವಿವರ | ಪಾವತಿಸಿದ ಮೊತ್ತ |
|---|---|---|---|---|
| 1 | ಬೆಂಗಳೂರು ಗ್ರಾಮಾಂತರ | 04.11.2019 | ಶ್ರೀ ಕೆಂಚಯ್ಯ, ಬೆಟ್ಟಹಳ್ಳಿ ಕಾಲೋನಿ, ಕುದೂರು ಹೋಬಳಿ,ಮಾಗಡಿ ತಾಲ್ಲೂಕು | 5.00 |
| 2 | ರಾಮನಗರ | 09.05.2020 | ಹೇಮಂತ್ ಡಿ ಸಿ ಕದರಯ್ಯನ ಪಾಳ್ಯ ಗ್ರಾಮ, ಕಸಬಾ ಹೋಬಳಿ, ಮಾಗಡಿ ತಾಲ್ಲೂಕು | 7.50 |
| 3 | ರಾಮನಗರ | 16.05.2020 | ಶ್ರೀಮತಿ ಗಂಗಮ್ಮ ಕೊತ್ತಗೊಂಡನಹಳ್ಳಿ ಗ್ರಾಮ, ಸೋಲೂರು ಹೋಬಳಿ, ಮಾಗಡಿ ತಾಲ್ಲೂಕು | 7.50 |
| 4 | ರಾಮನಗರ | 09.08.2022 | ಶ್ರೀಮತಿ ಮಹಾಲಕ್ಷ್ಮಿ, ಕಳ್ಳಿಪಾಳ್ಯ, ಕಸಬಾ ಹೋಬಳಿ, ಮಾಗಡಿ ತಾಲ್ಲೂಕು. | 7.50 |

| | | |
|---|---|---|
| ಆ) | ಚಿರತೆಗಳ ನಿಯಂತ್ರಣಕ್ಕೆ ಅನೇಕ ಬಾರಿ ಮನವಿ ಮಾಡಿದ್ದರೂ ಅರಣ್ಯ ಇಲಾಖೆಯ ಅಧಿಕಾರಿಗಳು ನಿರ್ಲಕ್ಷ್ಯವಹಿಸುತ್ತಿದ್ದು, ಇದರಿಂದ ಸಾರ್ವಜನಿಕರಲ್ಲಿ ಆತಂಕ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಚಿರತೆಗಳ ಹಾವಳಿಗೆ ಕಡಿವಾಣ ಹಾಕಿ, ಜೀವಹಾನಿ ಒಳಗಾಗಿರುವ ಕುಟುಂಬಗಳಿಗೆ ಸೂಕ್ತ ಪರಿಹಾರ ಹಣವನ್ನು ಶೀಘ್ರವಾಗಿ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು) | ಚಿರತೆ ಹಾವಳಿ ಕಂಡು ಬಂದ ತಕ್ಷಣ ಇಲಾಖೆಯ ಅಧಿಕಾರಿಗಳು ಸಕಾಲದಲ್ಲಿ ಸ್ಪಂದಿಸಿ ಈ ಕೆಳಕಂಡ ನಿಯಂತ್ರಣಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br><br>ಚಿರತೆ ಹಾವಳಿಯನ್ನು ನಿಯಂತ್ರಿಸಿ ಚಿರತೆಗಳ ಹಾವಳಿಗೆ ಕಡಿವಾಣ ಹಾಕಲು ಆನೆ ಹಿಮ್ಮೆಟ್ಟಿಸುವ ತಂಡ / ಕಳ್ಳಬೇಟೆ ತಡೆ ಶಿಬಿರ ಗಳನ್ನು ರಚನೆ ಮಾಡಿದ್ದು, ಈ ಕ್ಯಾಂಪ್ ಗಳಲ್ಲಿ ಇರುವ ಸಿಬ್ಬಂದಿಗಳು ದಿನನಿತ್ಯ ಚಿರತೆಯ ಹಾವಳಿಯಾಗುವ ಪ್ರದೇಶಗಳನ್ನು ಗುರುತಿಸಿ, ಸದರಿ ಪ್ರದೇಶಗಳಲ್ಲಿ ಬೋನುಗಳನ್ನು ಇಟ್ಟು ಚಿರತೆಯನ್ನು ಸೆರೆಹಿಡಿಯಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.<br><br>ರಾಜ್ಯದಲ್ಲಿ ಚಿರತೆ ಹಾವಳಿ ತಡೆಗಟ್ಟಲು ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಮುಂಜಾಗ್ರತಾ ಕ್ರಮವಾಗಿ ತಮ್ಮ ತಮ್ಮ ವಿಭಾಗಗಳಲ್ಲಿ 3-4 ಜನರನ್ನೊಳಗೊಂಡ ರಕ್ಷಣಾ ಪಡೆಯನ್ನು ರಚಿಸಿ ಹಾವಳಿ ಪ್ರದೇಶಗಳನ್ನು ಗುರುತಿಸಿ ಜನಸಂಪರ್ಕ ಸಭೆ ನಡೆಸುತ್ತಾರೆ. ಮುಂಜಾಗ್ರತಾ ಕ್ರಮವಾಗಿ ಹಾವಳಿ ಇರುವ ಕಡೆ ರಾತ್ರಿ ಗಸ್ತು ಮಾಡಲಾಗುತ್ತದೆ.<br><br>ಚಿರತೆ ಹಾವಳಿ ಇರುವ ಪ್ರದೇಶಗಳಲ್ಲಿ ಬೋನು, Tranquilizer Gun ಮತ್ತಿತರೆ ಉಪಕರಣಗಳೊಂದಿಗೆ ಚಿರತೆ ಹಿಡಿಯಲು ಸಿದ್ಧತೆ ಮಾಡಿಕೊಳ್ಳಲಾಗುತ್ತದೆ. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ವಲಯ ಅರಣ್ಯಾಧಿಕಾರಿಗಳೊಂದಿಗೆ ಚಿರತೆ ಹಾವಳಿ ಪ್ರದೇಶಗಳಿಗೆ ಬೇಟಿನೀಡಿ ಸಾರ್ವಜನಿಕರಿಗೆ ತಿಳುವಳಿಕೆ ನೀಡಲಾಗುತ್ತಿದೆ. ಅದರಲ್ಲೂ ಕಾಡಂಚಿನಲ್ಲಿ ವಾಸಿಸುವ ಜನರಿಗೆ ಹೆಚ್ಚಿನ ತಿಳುವಳಿಕೆ ನೀಡಲಾಗುತ್ತಿದೆ.<br><br>ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳಲ್ಲಿ ಚಿರತೆಯಿಂದ ಉಂಟಾದ ಮಾನವ ಪ್ರಾಣ ಹಾನಿ ಪ್ರಕರಣಗಳಿಗೆ ಸದರಿ ಪ್ರಶ್ನೆಯ "ಅ" ರಲ್ಲಿ ವಿವರಿಸಿರುವಂತೆ ಪರಿಹಾರ ಪಾವತಿಸಲಾಗಿದೆ. |

**ಸಂಖ್ಯೆ: ಅಪಜೀ 179 ಎಫ್‌ಡಬ್ಲ್ಯೂಎಲ್ 2022**

**(ಬಸವರಾಜ ಬೊಮ್ಮಾಯಿ)**
ಮುಖ್ಯಮಂತ್ರಿ